# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (463) 296 |
| ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ |
| ಉತ್ತರಿಸಬೇಕಾದ ದಿನಾಂಕ | : | 23-09-2020 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸೋಕ್‌ಫಿಟ್‌ಗಳು (ಕಕ್ಕಸು ಗುಂಡಿ ಅಥವಾ ಅಂತಹ ಇತರ) ಗುಂಡಿಗಳನ್ನು ಶುದ್ಧಗೊಳಿಸಲು ಅಥವಾ ಇತರ ಕೆಲಸಗಳಿಗಾಗಿ ಇಳಿದು ಮರಣ ಹೊಂದಿದ ಕಾರ್ಮಿಕರ ಸಂಖ್ಯೆ ಎಷ್ಟು? | ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸೋಕ್‌ಫಿಟ್‌ಗಳು ಮತ್ತು ಮ್ಯಾನ್‌ಹೋಲ್‌ಗಳನ್ನು ಶುದ್ಧಗೊಳಿಸುವ ಕೆಲಸದಲ್ಲಿ ನಿರತರಾದಾಗ 18 ಜನ ಕಾರ್ಮಿಕರು ಮರಣ ಹೊಂದಿರುತ್ತಾರೆ. ವಿವರ ಕೆಳಕಂಡಂತಿದೆ. |
| ಆ) | ಎಷ್ಟು ಪ್ರಕರಣಗಳಲ್ಲಿ ಅಂತಹವರ ಮಕ್ಕಳು ಅನಾಥರಾಗಿದ್ದಾರೆ; | ಮಕ್ಕಳು ಅನಾಥರಾಗಿರುವ ಯಾವ ಪ್ರಕರಣವು ಕಂಡುಬಂದಿರುವುದಿಲ್ಲ. |
| ಇ) | ಹಾಗೆ ನಿಧನರಾದ ಎಷ್ಟು ಕುಟುಂಬಗಳಿಗೆ ಸರ್ಕಾರ ನ್ಯಾಯ ಸಮ್ಮತವಾದ ಪರಿಹಾರ ಒದಗಿಸಿದೆ; | ಸೋಕ್‌ಫಿಟ್‌ಗಳು ಮತ್ತು ಮ್ಯಾನ್‌ಹೋಲ್‌ಗಳನ್ನು ಶುದ್ಧಗೊಳಿಸುವಾಗ ಮರಣ ಹೊಂದಿದ 18 ಜನ ಕಾರ್ಮಿಕರ ಕುಟುಂಬಗಳ ಅವಲಂಬಿತರಿಗೆ ನಿಯಮಾನುಸಾರ ಪರಿಹಾರ ಧನವನ್ನು ವಿತರಿಸಲಾಗಿದೆ. |
| ಈ | ಅಂತಹವರ ಎಷ್ಟು ಮಕ್ಕಳು ಶಿಕ್ಷಣ ಮುಂದುವರಿಸಿದ್ದಾರೆ? | ಮರಣ ಹೊಂದಿದ 18 ಜನ ಕಾರ್ಮಿಕರ 23 ಮಕ್ಕಳು ಶಿಕ್ಷಣ ಮುಂದುವರಿಸಿದ್ದಾರೆ. |

| ವರ್ಷ | ಮರಣ ಹೊಂದಿದವರ ಸಂಖ್ಯೆ |
|---|---|
| 2017-18 | 06 |
| 2018-19 | 04 |
| 2019-20 | 08 |
| ಒಟ್ಟು | 18 |

ಸಂಖ್ಯೆ: ಸಕಇ 441 ಎಸ್‌ಡಿಸಿ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ
ಸಮಾಜ ಕಲ್ಯಾಣ ಇಲಾಖಾ ಸಚಿವರು.